ಮೈಸೂರು ಡಿಸ್ಟ್ರಿಕ್ಟ್.

ತಾರೀಖು 30ನೇ ಅಕ್ಟೋಬರ್ 1884.

ಇದರಿಂದ ತಿಳಿಯಪಡಿಸುವದೇನಂದರೆ, ಯಡತೊರೆ ತಾಲ್ಲೂಕು ಸಬ್ ರಿಜಿಸ್ಟ್ರಿ ಆಫೀಸಿನಲ್ಲಿ ಶೇವಾರಸಾಗಿ ಯಿರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜನ್ನು ಹಾಜರ್ ಮಾಡಿದವರೇ ಆಗಲಿ ಅಥವಾ ವಾಪಸ್ ಪಡಿಯಲಿಕ್ಕೆ ಅವರಿಂದ ಕ್ರಮವಾದ ಅಧಿಕಾರ ಹೊಂದಿದ ಮುತಾಲೀಕ ಯಾ ಹಕ್ಕುದಾರರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯಿತು ಒಂದು ತಿಂಗಳಲ್ಲಿ ಸಬ್ ರಿಜಿಸ್ಟ್ರಾರ್ ರೂಬರೂ ಹಾಜರಾಗಿ ಅದನ್ನು ವಾಪಸ್ ತೆಗದುಕೊಳ್ಳಬಹುದು. ತಪ್ಪಿದರೆ 1877ನೇ ಇಸವಿ ಮೂರನೇ ನಂಬರ್ ರಿಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ಅದನ್ನು ನಾಶಪಡಿಸಲ್ಪಡುತ್ತೆ.

ನಂಬರ್ 9.

ದಸ್ತಾವೇಜು ನಂಬರು.	ದಸ್ತಾವೇಜು ರಿಜಿಸ್ಟ್ರಿಗೆ ಪಡೆದಾದ ತಾರೀಖು.	ರಿಜಿಸ್ಟ್ರರ ತಾರೀಖು.	ದಸ್ತಾವೇಜು ಬರದು ಕೊಟ್ಟವನ ಹೆಸರು.	ದಸ್ತಾವೇಜು ಬರಿಸಿ ಕೊಂಡವನ ಹೆಸರು.	ದಸ್ತಾವೇಜಿನ ಸ್ವಭಾವ.
32 / 1882—83	7—4—82	7—4—82	ಯಿಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ದೇವಪ್ಪ ಗೌಡನ ದ್ಯಾವೇಗೌಡನ ಹೆಂಡತಿ ಜರ್ಮಿನಿಂದ ಜೀವಿಸುವ ವಕ್ಕಲಿಗರ ಜಾತಿ ದೊಡ್ಡಿ	ಯಡತೊರೆ ತಾಲ್ಲೂಕು ಲೆಕ್ಕಿಕುಪ್ಪೆ ಗ್ರಾಮದಲ್ಲಿ ಇರುವ ವಕ್ಕಲಿಗರ ಜಾತಿ ಜಿರಾಯಿತು ಕಸಬಿನ ಮರಿಗೌಡ	100 ರೂಪಾಯಿನ ಭೂಸ್ಥಿತಿ ಕ್ರಯಪತ್ರ.

ನೋಟೀಸ್.

ತಾರೀಖು 1ನೇ ನವೆಂಬರ್ 1884.

ತಿರುಮಕೂಡ್ಲು ನರಸೀಪುರ ತಾಲ್ಲೂಕು ತಲಕಾಡು ಸಮೀಪದಲ್ಲಿರುವ ಅಕ್ಕೂರು ಗ್ರಾಮದಲ್ಲಿ ಕಲರಾ ಯಾನೆ ಉಬಾಲ್ ಜ್ವಾಲಾಭ್ ವೃಪದ್ರವ ವ್ಯಾಪಿಸಿರುವದರಿಂದ ತಲಕಾಡಿನಲ್ಲಿ ನಡಿಯುವ ಪಂಚಲಿಂಗ ದರುಶನಾರ್ಥವಾಗಿ ಹೋಗುವ ಜನಗಳಿಗೆ ಯಿದರಿಂದುಂಟಾಗುವ ಅಪಾಯವನ್ನ ಕುರಿತು ಯಿಚ್ಛರಿಸಿದೆ.

ಅಬ್ದುಲ್‌ಖಾದರ್, ಕೆ. ಬಿ.,
ಡೆಪ್ಯೂಟಿ ಕಮ್ಮಿಷನರ್ ವ ರಿಜಿಸ್ಟ್ರಾರ್.

ನಗರ ಡಿವೀಜ್ಞ.

ನಗರ ಡಿವೀಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 98.

ಮೃತಪಟ್ಟ ಗೌಸ್‌ಖಾನನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವಾರಸಲ್ಲೀಖಾನನು, ಮೃತಪಟ್ಟ ಸದರೀ ಗೌಸ್‌ಖಾನನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ಡಿಸ್ಟ್ರಿಕ್ಟ್ ಚಿಕ್ಕಮಗಳೂರು ಸ್ಥಳದ ಗೌಸ್‌ಖಾನನು ಸದರೀ ಚಿಕ್ಕಮಗಳೂರು ವಾಸಸ್ಥನಾಗಿ ಮೃತಪಟ್ಟ ಗೌಸ್‌ಖಾನನ ಜಿಂದಗಿ ಬಗ್ಯಾಗಿ ಬರತಕ್ಕ 1,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾನೆ.

ಸದರೀ ದರಖಾಸ್ತುದಾರನಾದ ವಾರಸಲ್ಲೀಖಾನನ ಅರ್ಜೀಯನ್ನು 1884ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌಸ್‌ಖಾನನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 99.

ಮೃತಪಟ್ಟ ಪ್ರಭುದೇವರ ಬಸಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಲ್ಲಪ್ಪ, ಮೃತಪಟ್ಟ ಸದರೀ ಬಸಪ್ಪನಿಗೆ ಮಗನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕು ಬೀರೂರು ಸ್ಥಳದ ಮಲ್ಲಪ್ಪನು ಸದರೀ ಬೀರೂರು ವಾಸಸ್ಥನಾಗಿ ಮೃತಪಟ್ಟ ಬಸಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿಗಳ ಸಾಲಗಳನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪನ ಅರ್ಜೀಯನ್ನು 1884ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಬಸಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅರ್ಜೀ ನಂಬರ್ 100.

ಮೃತಪಟ್ಟ ಮಲ್ಲಿಕಾರ್ಜುನಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಮಲ್ಲಪ್ಪ, ಮೃತಪಟ್ಟ ಸದರೀ ಮಲ್ಲಿಕಾರ್ಜುನಪ್ಪನಿಗೆ ಅಂಣನು ಆಗಬೇಕೆಂಬ ಹಕ್ಕುದಾರೀ ಮೇಲೆ ಕಡೂರು ತಾಲ್ಲೂಕು ಬೀರೂರು ಸ್ಥಳದ ಮಲ್ಲಪ್ಪನು ಸದರೀ ಬೀರೂರು ವಾಸಸ್ಥನಾಗಿ ಮೃತಪಟ್ಟ ಮಲ್ಲಿಕಾರ್ಜುನಪ್ಪನ ಜೆಂದಗಿ ಬಗ್ಯಾಗಿ ಬರತಕ್ಕ 2,000 ರೂಪಾಯಿಗಳ ಸಾಲಗಳನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಮಲ್ಲಪ್ಪನ ಅರ್ಜೀಯನ್ನು 1884ನೇ ಇಸವಿ ನವಂಬರ್ ತಿಂಗಳು 27ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಕಾರ್ಜುನಪ್ಪನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1884ನೇ ಇಸವಿ ಅಕ್ಟೋಬರ್ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ನರಹರಿರಾವ್,
ಡಿಸ್ಟ್ರಿಕ್ಟ ಜಡ್ಜ.

ಶಿವಮೊಗ್ಗಾ ಡಿಸ್ಟ್ರಿಕ್ಟ.

ತಾರೀಖು 14ನೇ ಅಕ್ಟೋಬರ್ 1884.

ಮಾಹೆ ಗುಜಸ್ತಾ 1ನೇ ಮುಕ್ತುಮಿನ ರಾತ್ರಿ ಜೆಂಕೀಪುರ—ಶಿವಮೊಗ್ಗಾ ರಸ್ತೆಯಲ್ಲಿ ಟಪ್ಪಾಲ್ ಚೋರಿ ನಡಸಿದ ಜನಗಳ ಪತ್ತೇ ಬಗ್ಯೆ ಅನುಕೂಲವಾದ ವರ್ತಮಾನವನ್ನು ಕೊಡುವವರಿಗೆ 50 ರೂಪಾಯಿಗಳ ಇನಾಂ ಕೊಡಲ್ಪಡುವದು.

ಇದರಡೀ ತಪಸೀಲ್ ಕಂಡ ಮಾಲ್‌ಗಳು ಚೋರಿ ಹೋಗಿರುವಂತೆ ರಿಪೋರ್ಟುಗಿರುತ್ತೆ:—

ಭಾಂಗೀ ನಂಬರ್ 1.

	ರೂ.	ಆ.	ಪೈ.
ಸುಮಾರು 25 ವರಹಾ ತೂಕದ ಅಡ್ಡಿಕೆ ಕೆಂಪು ಬಂಣದ ತಲೆ ಹಾಕಿದೆ	130	0	0
ಹೊಸಧಾರವಲ್ಲಿ ಪೋಣಿಸಿದ ಭಂಗಾರದ ಗುಂಡಿನ 46 ಗುಂಡು 1 ಹವಳ ಪೋಣಿಸಿರುತ್ತೆ, ಸುಮಾರು 18 ರೂಪಾಯಿ ತೂಕ	100	0	0
ಭಂಗಾರದ ಬಾವಲಿ ಸುತ್ತಲೂ ಹಳೇಮುತ್ತು ಹಾಕಿರುತ್ತೆ	20	0	0
ಬಳ್ಳೀ ಪೂಡಗ, ಮಕ್ಕಳ ಬಾಬತು	5	0	0

ಭಾಂಗೀ ನಂಬರ್ 2.

ಒಂದು ಜೊತೆ ಹೊಸಧೋತ್ರ	10	0	0

ಸೈಯದ್ ನಸಿರುದ್ದೀನ್,
ಘರ್ ಡೆಪ್ಯುಟಿ ಕಮ್ಮಿಷನರ್.